

ಲಾಕ್‌ಡೌನ್ ನಂತರ ಶಾಲಾ–ಕಾಲೇಜು ಆರಂಭಗೊಂಡ ಸಂದರ್ಭದಲ್ಲಿ, ಬೆಂಗಳೂರಿನ ವಿದ್ಯಾಸಂಸ್ಥೆಯೊಂದರಲ್ಲಿ ಕೊರೊನಾ ಜಾಗೃತಿ ಕಾರ್ಯಕ್ರಮ.
ಫೋಟೋ: ಅನೂಪ್ ರಾಘ್. ಟಿ.

ಮಾದರಿಗೆ ಒಗ್ಗಿಕೊಂಡ ಶಿಕ್ಷಕರು ಪಾಠ ಮಾಡುತ್ತಲೇ ಹೋದರು. ನಂತರದ ಒಂದೋ ಎರಡೋ ತಿಂಗಳಲ್ಲಿ ನಡೆದ ಪೋಷಕರ ಸಭೆಗಳಲ್ಲಿ ಪೋಷಕರು ವ್ಯಕ್ತಪಡಿಸಿದ ಅಭಿಪ್ರಾಯಗಳು ಶಾಲಾಕಾಲೇಜು ಆಡಳಿತ ಮಂಡಳಿಗಳನ್ನು ದಂಗು ಬಡಿಸಿತ್ತು. ಬಹುತೇಕ ವಿದ್ಯಾರ್ಥಿಗಳು ಆನ್‌ಲೈನ್ ಪಾಠಗಳಿಗಾಗಿ ಮೊಬೈಲು, ಲ್ಯಾಪ್‌ಟ್ಯಾಪ್, ಟ್ಯಾಬ್ಲೆಟ್‌ಗಳನ್ನು ಬಳಸುತ್ತ ಸಹಜ ಬರವಣಿಗೆಯನ್ನೇ ಮರೆತು ಕೂತರು. ಮೊಬೈಲು, ಕಂಪ್ಯೂಟರ್ ಪರದೆಗಳನ್ನು ತದೇಕಚಿತ್ತದಿಂದ ನೋಡುತ್ತ ಕಣ್ಣುರಿ, ಕತ್ತು, ಬೆನ್ನುನೋವಿನಂಥ ಸಮಸ್ಯೆಗಳಿಗೆ ತುತ್ತಾದದ್ದಲ್ಲದೇ, ಶಾಲೆಯ ಸಹಜ ಚಟುವಟಿಕೆ, ಗೆಳೆಯರೊಂದಿಗಿನ ಸ್ನೇಹ, ಹರಟೆ, ಆಟೋಟಗಳನ್ನು ಮಿಸ್ ಮಾಡಿಕೊಂಡು ಖಿನ್ನತೆ, ಮಾನಸಿಕ ಕ್ಷೋಭೆಗಳಿಗೂ ಗುರಿಯಾದರು.

ಮೊದ ಮೊದಲು ಅಳುಕಿನಿಂದಲೇ ಆನ್‌ಲೈನ್ ಶಿಕ್ಷಣಕ್ಕೆ ತೆರೆದುಕೊಂಡ ಎಳೆಯ ಮನಸ್ಸುಗಳು, ಕಣ್ಣುಗಳು ಈಗಲೂ ಹಿಂಸೆ ಅನುಭವಿಸುತ್ತಿವೆ. ಸೋಂಕು ಸಂಪೂರ್ಣ ನಿಯಂತ್ರಣಕ್ಕೆ ಬರುವವರೆಗೂ ಎಳೆಯರಿಗೆ ಶಾಲೆ ಇಲ್ಲ ಎಂಬುದು ಸರ್ಕಾರದ ನಿರ್ಧಾರ. ತಂದೆ ತಾಯಿಯರು ಕೆಲಸಕ್ಕೆ ಹಾಜರಾಗುತ್ತಿರುವುದರಿಂದ ಮನೆಯಲ್ಲಿ ಮಕ್ಕಳನ್ನು ನೋಡಿಕೊಳ್ಳುವವರಿಲ್ಲದೇ ಹೊಸ ಸಮಸ್ಯೆಗಳು ಶುರುವಾಗಿವೆ. ಇಡೀ ಜಗತ್ತಿನ ಎಲ್ಲ ವಿಷಯಗಳನ್ನು ಅಂಗೈಯಲ್ಲೇ ತೆರೆದಿಡುವ ಮೊಬೈಲಿನ ಸಂಪರ್ಕ ಮತ್ತು ಬಳಕೆ ಮಿತಿಮೀರಿ ಹೋಗಿ ಮಕ್ಕಳು ಪುಸ್ತಕಗಳಿಂದ ದೂರವಾಗಿರುವುದೂ ಕಂಡು ಬಂದಿದೆ. ಇಂತಹ ಇಕ್ಕಟ್ಟಿನ ಸಮಯದಲ್ಲೇ ಭೌತಿಕ ತರಗತಿಗಳು ಶುರುವಾಗಿ, ಪರೀಕ್ಷೆಗಳು ನಿಕ್ಕಿಯಾಗಿ, ವೇಳಾಪಟ್ಟಿ ಪ್ರಕಟಗೊಂಡಿದೆ.

## ಮುಗಿದ ಸಿಲಬಸ್-ಮುಗಿಯದ ಆತಂಕ

ಸಿಲಬಸ್ ಬಹುತೇಕ ಮುಗಿದೂ ಹೋಗಿದೆ. ಫೀಸು ಕಟ್ಟಲು ಎದ್ದ ತಕರಾರಿನಿಂದಾಗಿ, ಶಿಕ್ಷಕರಿಗೆ ಸರಿಯಾಗಿ ಸಂಬಳ ಕೊಡಲಾಗದ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳು ಅರ್ಧ ಸಂಬಳ ನೀಡಿಯೋ, ಇಲ್ಲವೆ ಬೇರೆ ಕಡೆ ಹೋಗಿ ಎಂದು ಶಿಕ್ಷಕರನ್ನು ಮನೆಗೆ ಕಳಿಸಿವೆ. ಅನೇಕ ಶಿಕ್ಷಕರು ಕೆಲಸ ಕಳೆದುಕೊಂಡು, ಬೀದಿ ಬದಿಯ ವ್ಯಾಪಾರಕ್ಕೆ ಕೂತರು. ಈಗ ಶಾಲೆಗಳಲ್ಲಿ ಪೂರ್ಣ ಪ್ರಮಾಣದ ಶಿಕ್ಷಕರಿಲ್ಲ. ಶಿಕ್ಷಕರಿಲ್ಲದ, ಕೋವಿಡ್ ನಿರ್ವಹಣೆಯ ವ್ಯವಸ್ಥೆ ಇಲ್ಲದ ಶಾಲೆಗಳ ಮಕ್ಕಳು ನಿರಾತಂಕವಾಗಿ ಪರೀಕ್ಷೆ ಬರೆಯುವುದಾದರೂ ಹೇಗೆ? ಡಿಗ್ರಿ ವಿದ್ಯಾರ್ಥಿಗಳು ಸ್ವಯಂ ಜವಾಬ್ದಾರಿಯಿಂದ ಹೇಗೋ ಕಲಿತುಬಿಡುತ್ತಾರೆ. ಆದರೆ ಹಂತ ಹಂತದಲ್ಲೂ ಮಾರ್ಗದರ್ಶನ ಬಯಸುವ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಮಕ್ಕಳನ್ನು ಪರೀಕ್ಷೆಗೆ ಸಜ್ಜು ಮಾಡುವುದು ಹೇಗೆ? ಪೂರ್ತಿ ಫೀಸು ಸಿಗದೆ ನನಗೆ ಅನ್ಯಾಯವಾಗಿದೆ ಎಂದು ಖಾಸಗಿ ಶಾಲೆಗಳವರು ನ್ಯಾಯಲಯದ ಮೊರೆಹೋಗಿದ್ದಾರೆ. ಅತೃಪ್ತ ಶಿಕ್ಷಕರು ಸರಿಯಾಗಿ ಪಾಠ ಮಾಡುತ್ತಾರಾ? ಸಮಸ್ಯೆ ಯಾವಾಗ ಬಗೆ ಹರಿಯುತ್ತದೆ? ಉತ್ತರವಿರದ ಅನೇಕ ಪ್ರಶ್ನೆಗಳಿವೆ.

ವಯೋಸಹಜ ಆಟ ತಮಾಷೆ, ಓದು, ಬರಹಗಳಿಂದ ದೂರವಾಗಿದ್ದ ವಿದ್ಯಾರ್ಥಿಗಳೀಗ ತಮ್ಮ ವಿದ್ಯಾರ್ಥಿ ಜೀವನದ ಅತ್ಯಂತ ಪ್ರಮುಖ ವಾರ್ಷಿಕ ಪರೀಕ್ಷೆಗಳನ್ನೆದುರಿಸಲು ಸಜ್ಜಾಗುತ್ತಿದ್ದಾರೆ. ಕಳೆದ ನಾಲ್ಕಾರು ತಿಂಗಳು ನಡೆದ ಆನ್‌ಲೈನ್ ಕ್ಲಾಸ್‌ನಂತೆಯೇ ಪರೀಕ್ಷೆಗಳನ್ನು ಆನ್‌ಲೈನ್‌ನಲ್ಲೇ ನಡೆಸಲಾಗಿದೆ. ಮನೆಯಲ್ಲೇ ಇದ್ದ ಮಕ್ಕಳು ಉತ್ತರಗಳನ್ನು ಪುಸ್ತಕ ಅಥವ 'ಗೂಗಲ್' ಬಳಸಿ ಉತ್ತರಿಸಿದ್ದಾರೆ. ಹಾಗಾಗಿ ಅವರು ಪಡೆದ ಅಂಕಗಳು ನಿಜವಾದ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳಲ್ಲ. ಕಲಿಕೆಯ ಮಟ್ಟ ಏನು ಎಂಬುದು ಶಿಕ್ಷಕರಿಗೂ ನಿಖರವಾಗಿ ತಿಳಿದಿಲ್ಲ. ಇಂತಹ ದುರಿತ ಕಾಲದಲ್ಲಿ ವಾರ್ಷಿಕ ಪರೀಕ್ಷೆಗಳಿಗೆ ನಮ್ಮ ಮಕ್ಕಳು ತಯಾರಾಗಬೇಕಿದೆ. ಸಹಜವಾಗಿ ಓದುವುದನ್ನೇ ಮರೆತಂತಿರುವ ಮಕ್ಕಳನ್ನು ಇರುವ ಅತ್ಯಲ್ಪ ಸಮಯದಲ್ಲಿ ಪರೀಕ್ಷೆಗೆ ತಯಾರಿ ನಡೆಸುವುದು ಹೇಗಪ್ಪ ಎಂಬ ಆತಂಕದಲ್ಲಿದ್ದಾರೆ. ಈ ಮಧ್ಯೆ ವಿದ್ಯಾರ್ಥಿಗಳೊಂದಿಗೆ ಪೋಷಕರೂ ಪರೀಕ್ಷಾಭಯ ತಲೆಗೇರಿಸಿಕೊಂಡಿದ್ದಾರೆ. ಒಂದು ಬಗೆಯ ಆತಂಕ, ಒತ್ತಡ ಮತ್ತು ಭಯ ವಿದ್ಯಾರ್ಥಿಗಳನ್ನು ಆವರಿಸಿ 'ಪರೀಕ್ಷಾ ಫೋಬಿಯ' ಹರಡಲು ಶುರುವಾಗಿದೆ.

## ಸಮಸ್ಯೆಗಳ ಸರಮಾಲೆ

ಪಿಯುಸಿ ಮತ್ತು ಎಸ್ಸೆಸ್ಸೆಲ್ಸಿಗೆ ಭೌತಿಕ ತರಗತಿಗಳು ಪ್ರಾರಂಭವಾಗಿ ಕೇವಲ ತಿಂಗಳ ಮೇಲಾಗಿದೆ. ವಿದ್ಯಾರ್ಥಿಗಳ ಕಲಿಕೆಯ ಮಟ್ಟ ಮತ್ತು ಅವರು ಎದುರಿಸುತ್ತಿರುವ ಸಮಸ್ಯೆಗಳನ್ನು ಚರ್ಚಿಸಲು ಇತ್ತೀಚೆಗೆ ನಮ್ಮ ಕಾಲೇಜಿನಲ್ಲಿ ಕರೆದಿದ್ದ ಪೇರೆಂಟ್ಸ್ ಮೀಟಿಂಗಿಗೆ ಬಂದಿದ್ದ ಪೋಷಕರೊಬ್ಬರು 'ಸರ್, ಆನ್‌ಲೈನ್‌ನಲ್ಲಿ ಮಾಡಿದ ಪಾಠ ಸ್ವಲ್ಪವೂ ಅರ್ಥವಾಗಿಲ್ಲ. ಪರೀಕ್ಷೆ




**ಸಮಯ ಕಡಿಮೆ ಇದೆ. ಸಂಪನ್ಮೂಲಗಳೂ ಅಷ್ಟಕ್ಕಷ್ಟೇ. ಇರುವ ಅತ್ಯಲ್ಪ ಸಮಯವನ್ನೇ ವ್ಯವಸ್ಥಿತವಾಗಿ ಬಳಸಿಕೊಂಡರೆ ಉದ್ದೇಶಿತ ಫಲಿತಾಂಶ ಮತ್ತು ಬೇಕಾದಷ್ಟು ಅಂಕಗಳನ್ನು ಪಡೆಯಬಹುದು.**